# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 95 |
| ಸದಸ್ಯರ ಹೆಸರು | : | ಶ್ರೀ. ಕೆ.ಹರೀಶ್ ಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 05-07-2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಮಂಗಳೂರು – ಕಾರ್ಕಳ– ಸಾಣೂರು ಚತುಷ್ಪಥ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಾಗಿ ಮಂಜೂರಾದ ಅನುದಾನವೆಷ್ಟು; ಕಾಮಗಾರಿ ಆರಂಭವಾಗಿ ವರ್ಷಗಳೇ ಕಳೆದರೂ ಕಾಮಗಾರಿಯು ನಿಧಾನಗತಿಯಲ್ಲಿ ಸಾಗುತ್ತಿದ್ದು, ಸಾರ್ವಜನಿಕರಿಗೆ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಹೌದಾದಲ್ಲಿ, ಕಾಮಗಾರಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ರಾಷ್ಟ್ರೀಯ ಹೆದ್ದಾರಿ 169ರ ಕಾರ್ಕಳ – ಮಂಗಳೂರು ವಿಭಾಗದ ಕಿ.ಮೀ. 691.350 (ಸಾಣೂರು) ರಿಂದ ಕಿ.ಮೀ. 736.362 (ಭೀಕರನ ಕಟ್ಟೆ) ವರೆಗೆ ಚತುಷ್ಪಥ ರಸ್ತೆಯನ್ನು ರೂ. 1137.00 ಕೋಟಿ ಮೊತ್ತದಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರಿಂದ ಕೈಗೊಳ್ಳಲಾಗುತ್ತಿದೆ.<br><br>ಸದರಿ ಯೋಜನೆಯ ಅನುಮೋದಿತ ಭೂಸ್ವಾಧೀನ ಮೊತ್ತ ರೂ.485.05 ಕೋಟಿಗಳು ಆಗಿದ್ದು, ಹೆಚ್ಚುವರಿ ಭೂಸ್ವಾಧೀನದ ಮೊತ್ತ ರೂ.635.55 ಆಗಿರುತ್ತದೆ. 3(ಜಿ) ಅವಾರ್ಡ್ ತಯಾರಿಸಿದ ನಂತರ ಮತ್ತು ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ ಭೂಸ್ವಾಧೀನದ ಮೊತ್ತವು ಹೆಚ್ಚಾಗಿರುತ್ತದೆ. ಕೆಲವು 3(ಜಿ) ಅವಾರ್ಡ್‌ನ್ನು ಚಾಲೆಂಜ್ ಮಾಡಲಾಗಿದ್ದು, ನ್ಯಾಯಾಲಯದಲ್ಲಿ ಪ್ರಕರಣವು ಪ್ರಕ್ರಿಯೆಯಲ್ಲಿದೆ. ಆದ್ದರಿಂದ ಕಾಮಗಾರಿಯ ಪ್ರಗತಿಯು ವಿಳಂಬವಾಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ವರದಿಸಿರುತ್ತಾರೆ. |
| ಆ) | ಸದರಿ ಕಾಮಗಾರಿಗಾಗಿ ಇದುವರೆಗೆ ಬಿಡುಗಡೆಯಾದ ಅನುದಾನದ ಮೊತ್ತವೆಷ್ಟು? (ಸಂಪೂರ್ಣ ಕಾಮಗಾರಿಯ ವಸ್ತುನಿಷ್ಠ ಪ್ರಗತಿಯ ವರದಿ ನೀಡುವುದು) | **ಸದರಿ ಕಾಮಗಾರಿಯ ಸಂಕ್ಷಿಪ್ತ ವರದಿ ಈ ಕೆಳಗಿನಂತಿದೆ.**<br>1) ಯೋಜನೆಯ ಉದ್ದ– 45.012 ಕಿ.ಮೀ.<br>2) ಬಿಡ್ ಪ್ರಾಜೆಕ್ಟ್ ಮೊತ್ತ – ರೂ. 1137.00 ಕೋಟಿಗಳು<br>3) ಕಾಮಗಾರಿಯ ಪ್ರಾರಂಭಿಕ ದಿನಾಂಕ: 10.10.2022.<br>4) ಕಾಮಗಾರಿಯು ಮುಕ್ತಾಯವಾಗಬೇಕಿರುವ ದಿನಾಂಕ: 10.10.2024.<br>5) ಭೌತಿಕ ಪ್ರಗತಿ ಶೇ.23.25<br>6) ಆರ್ಥಿಕ ಪ್ರಗತಿ ಶೇ.39.96<br><br>ಭೂಸ್ವಾಧೀನದ ಪ್ರಸ್ತುತ ಹಂತ ಹಾಗೂ ಭೂಪರಿಹಾರದ ವಿವರಗಳು ಈ ಕೆಳಗಿನಂತಿವೆ:<br><br>ಅ) 3ಜಿ ಅವಾರ್ಡ್ ಅನುಮೋದಿತ ಮೊತ್ತ ರೂ. 566.58 ಕೋಟಿಗಳು<br>ಆ) ನೀಡಲಾದ ಭೂ ಪರಿಹಾರದ ಮೊತ್ತ ರೂ. 319.79 ಕೋಟಿಗಳು<br>ಇ) ಬಾಕಿ ಇರುವ ಭೂ ಪರಿಹಾರದ ಮೊತ್ತ ರೂ. 246.79 ಕೋಟಿಗಳು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ವರದಿಸಿರುತ್ತಾರೆ. |

**ಸಂಖ್ಯೆ: ಲೋಇ 137 ಸಿಎನ್‌ಹೆಚ್ 2023(ಇ)**

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು,